ಕವಿತೆ



ಶರೀಫ್ ಹಸಮಕಲ್

ಕಲೆ: ರೂಪಶ್ರೀ ಕಲ್ಲಿಗನೂರು

# ಗೋಡೆಯ ಬೆನ್ನತ್ತಿದ ಬೆನ್ನು

ಹೊರಗೆ ಒಣಗಿ
ಒಳಗೆ ಹಸಿ ಎನಿಸಲು
ಹೊಂಟ ದಾರಿಗೆ ಖೂನಗಳೇ ತುಂಬಿರಲು
ಕೂಗಿದ ಕೂಗಿಗೆ ಲಘು ಗುರುವಿನ ಭಯ

ನಡುರಾತ್ರಿಯಲೂ
ಸುಡುವ ರೂಡಿ ಹೆಚ್ಚಿಸಿಕೊಂಡ ಕಡುಬಿಸಿಲು
ಮುಗುಮುಗಿಸುವ ಹಟ ಹಿಡಿದು ನಿಂತು ತೂರಾಡುವ
ಗಾಳಿ
ಬೆಳಕಿಗೆ ಉರಿಯುವ ಉಲಿಯುವ ಹುಮ್ಮಸ್ಸು
ಕತ್ತಲೆಲ್ಲವೂ ಹಿತವೆನಿಸುವ ಮಧುರನಶೆ



ಮುಲಾಮನ್ನೆ ನುಂಗಿ ಮೈಮರೆಸುವ ಗಾಯ
ಆಕಾಶದ ಕಣ್ಣುಗಳಿಗೆ ಸವಾಲೆಸೆದ ಕಂಬನಿಗಳು
ಪಾತಾಳದ ಆಳವನ್ನೆ ತನ್ನ
ಒಡಲೊಳಗಿಟ್ಟುಕೊಂಡ
ಮನೆಯ ಮುಂದಿನ ಆ ವರ್ಣ
ಈಗೊಂದು ನಿಟ್ಟುಸಿರು ಉಸಿರಾಡಲು
ಗೋಡೆಯ ಬೆನ್ನತ್ತಿದ ಬೆನ್ನು

ಪಾಪಪ್ರಜ್ಞೆಗೆ
ಗರುಡಗಂಬವಾದ ಗೋರಿ
ಉದುರಿ ಬೀಳುವ ಎಲೆಯೊಂದಕೆ
ಹೂವೊಂದಕೆ
ತೆವಳುವ ಚಾಳಿ ಕಲಿಸಿದ ತಂಗಾಳಿ
ಕತ್ತಲೊಳಗೆ ಕಣ್ಣು ತೆರೆದು ನೋಡುವ
ಗೋಡೆಗಂಟಿದ ಫೋಟೋ
ಎದೆಯ ಕನವರಿಕೆಗಳೆಲ್ಲಾ ಒಗ್ಗೂಡಿ
ಗೋಡೆಯ ಬೆನ್ನು ಬಿದ್ದಿವೆ.